# ಕೀಲಿ ಉತ್ತರ

**ತರಗತಿ : 9** **ವಿಷಯ : ಕನ್ನಡ ಪ್ರಥಮ ಭಾಷೆ** **9/1**

| ಪ್ರಶ್ನೆ ಸಂಖ್ಯೆ | ಕೀಲಿ ಉತ್ತರ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|---|
| I. 1. | B | ಏನ್ರಪ್ಪಾ | 01 |
| 2. | B | ಯಣ್ | 01 |
| 3. | A | ತತ್ಪುರುಷ | 01 |
| 4. | D | ಅಂತಸ್ತಿನಲ್ಲಿ | 01 |
| 5. | A | ಕಜ್ಜ | 01 |
| 6. | C | I, II ಮತ್ತು III | 01 |
| II. 7. | | ಅಂಕಿತನಾಮ | 01 |
| 8. | | ವಿವರಿಸು | 01 |
| 9. | | ತಿರಸ್ಕಾರ | 01 |
| 10. | | ಅಸ್ವಭಾವ | 01 |
| III.A. 11. | | ಗೋವೆಯ ಪೋರ್ಚುಗೀಸ್ ಗವರ್ನರ್ ಲೂಯಿಸ್ ಅಟಾಯಿಡೆ ಉದ್ಧಟತನದಿಂದ ಪತ್ರ ಬರೆದ ಕಾರಣ | 01 |
| 12. | | ಉದ್ಧಟತನದಿಂದ ಪತ್ರ ಬರೆದವರು ಗೋವೆಯ ಪೋರ್ಚುಗೀಸ್ ಗವರ್ನರ್ ಲೂಯಿಸ್ ಅಟಾಯಿಡೆ | 01 |
| 13. | | ಮಹಾಮಂತ್ರಿಯ ಹೆಸರು ವರ್ಧಮಾನ ಸಿದ್ಧಾಂತಿ | 01 |
| 14. | | ಹಾಡುವಳ್ಳಿ, ಗೇರುಸೊಪ್ಪೆಗಳ ಮಹಾರಾಣಿಗೆ, ಗೋವೆಯ ಗವರ್ನರ್ ಲೂಯಿಸ್ ಅಟಾಯಿಡೆಯ ಶುಭಾಶಯಗಳು | 01 |
| III.B. 15. | | ಹುಟ್ಟುತ ಹುಲ್ಲಾಗಿ, ಬೆಳೆಯುತ ದಿವಿಯಾಗಿ ಬಿದಿರು ಬೆಳೆಯಿತು. | 01 |
| 16. | | ಮಕ್ಕಳನು ತೂಗುವ ತೊಟ್ಟಿಲಿಗೆ ಬಿದಿರನ್ನು ಬಳಸುತ್ತಾರೆ. | 01 |
| III. C. 17. | | ಹೊಳೆ ದಾಟಿದ ಖುಷಿಯಲ್ಲಿ ಓಡತೊಡಗಿದ್ದಾರೆ | 01 |

| ಪ್ರಶ್ನೆ ಸಂಖ್ಯೆ | ಕೀಲಿ ಉತ್ತರ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|---|
| IV. 18. | | ವಿದ್ಯಾರ್ಥಿಗಳ ಉತ್ತರದ ಖಚಿತತೆಯನ್ನು ಆಧರಿಸಿ ಅಂಕ ನೀಡಬೇಕು. | 02 |
| 19. | | ವಿದ್ಯಾರ್ಥಿಗಳ ಉತ್ತರದ ಸಮರ್ಥನೆಯನ್ನು ಗಮನಿಸಿ ಅಂಕ ನೀಡಬೇಕು. | 02 |
| 20. | | ಮದುವೆ, ಗೃಹಪ್ರವೇಶ, ಜಾತ್ರೆ, ಉತ್ಸವ, ಹಬ್ಬ ಹರಿದಿನ, ಸಾಮಾಜಿಕ ಸಂದರ್ಭಗಳಲ್ಲಿ ಮನರಂಜನೆಯಾಗಿಯೂ ಬಳಕೆಯಾಗುತ್ತಿದೆ. | 02 |
| 21. | | ವೀರಗಾಸೆ ಕುಣಿತದವರ ವೇಷಭೂಷಣ ವಿಶೇಷವಾಗಿರುತ್ತದೆ. ಬಿಳಿಯ ಪಂಚೆಯ ವೀರಗಚ್ಚೆ, ತಲೆಗೆ ಅರಿಶಿಣ ಅಥವಾ ನೀಲಿ ಬಣ್ಣದ ರುಮಾಲು, ಕಾವಿ ಬಣ್ಣದ ಕಸೆಯಂಗಿ, ಕೊರಳಲ್ಲಿ ರುದ್ರಾಕ್ಷಿ ಸರ, ಹಣೆಗೆ ವಿಭೂತಿ, ಕರ್ಣಕುಂಡಲ, ಸೊಂಟಪಟ್ಟಿ, ಬಿಚ್ಚುಗತ್ತಿ, ಕಾಲ್ಗೆಜ್ಜೆ ಧರಿಸುತ್ತಾರೆ. | 02 |
| 22. | | ಕೊಟ್ಟ ಮಾತಿನಂತೆ ನಡೆಯದವರು ಈ ಮಾನವ ಕುಲಕ್ಕೆ ಬೇಡ. ಇಂತಹ ಕೀಳು ಮನುಷ್ಯರ ಸ್ನೇಹ ಮಾಡಿ ಕೆಡುವುದು ಬೇಡ ಎಂದು ತತ್ವ ಪದಕಾರರು ಹೇಳಿದ್ದಾರೆ. | 02 |
| 23. | | ಆಂಡಯ್ಯ ಕವಿಯು ಈ ಪದ್ಯದಲ್ಲಿ ಕನ್ನಡ ನಾಡಿನಲ್ಲಿ ಮಲ್ಲಿಗೆ, ಸಂಪಗೆ, ದಾಳಿಂಬ, ಶ್ರೀಗಂಧ, ಮಾವು, ಅಡಿಕೆ ಮೊದಲಾದ ಗಿಡಮರಗಳ ಪ್ರಕೃತಿಯ ರಮ್ಯತೆಯನ್ನು ಮೆಚ್ಚಿ ವರ್ಣಿಸಿದ್ದಾನೆ. | 02 |
| 24. | | ತನ್ನ ಸುತ್ತಲಿನವರಿಗೆ ನೆರವಾಗುವ ಮೂಲಕ, ನಾಟಕ ರಂಗವನ್ನು ಮರೆಯಲಿಲ್ಲ, ಪ್ರತಿಭೆ ಅಂತಃಕರಣ, ಹೃದಯ ಶ್ರೀಮಂತಿಕೆಯಿಂದ ಕಲಾ ರಸಿಕರ ಮನಸ್ಸಿನಲ್ಲಿ ಅಮರರಾಗಿದ್ದಾರೆ.<br>(ಇದಲ್ಲದೇ ಇತರ ಅಂಶಗಳನ್ನು ಗಮನಿಸುವುದು) | 02 |
| 25. | | ಹೋರಾಟದಲ್ಲಿ ಜಯಗಳಿಸಿದರೆ ಸ್ವಾತಂತ್ರ್ಯ ನೋಡುವ ಭಾಗ್ಯ ನಮ್ಮದಾಗುತ್ತದೆ. ಸೋತರೆ ಈ ಪುಣ್ಯಭೂಮಿಯಲ್ಲಿ ವೀರ ಸ್ವರ್ಗವನ್ನು ಸೇರಿದಂತಾಗುತ್ತದೆ. ಇಂತಹ ಸಾವು ಎಲ್ಲರಿಗೂ ಬರುವುದು ಅಪರೂಪ. | 02 |

| ಪ್ರಶ್ನೆ ಸಂಖ್ಯೆ | ಕೀಲಿ ಉತ್ತರ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|---|
| 26. | | ಭೂಮಿ–ಆಕಾಶದಲ್ಲಿ ಪುಟ್ಟ ಹಕ್ಕಿಗೆ ಭುಜಂಗನ ಭಯ, ಗಿಡುಗನ ಭಯ ಆವರಿಸಿದ್ದರೂ ಪುಟ್ಟಹಕ್ಕಿ ಧೈರ್ಯದಿಂದ ರೆಕ್ಕೆ ಬಿಚ್ಚಿ ಭೂಮಿ–ಆಕಾಶದಲ್ಲಿ ಹಾರಾಡುತ್ತದೆ. | 02 |
| 27. | | ಇಂದುಮತಿ ಲಮಾಣಿಯವರು 'ನನ್ನಾಸೆ' ಪದ್ಯದಲ್ಲಿ ಗೆಲುವು ಸಾಧಿಸಲು ಅವರ ಆಸೆಗಳನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೇ ಇಲ್ಲಿ ಅಳುವ ಕಂದನನ್ನು ನಗಿಸಲು ಸಂಗೀತದ ಮೂಲಕ ತಾಯಿ ತನ್ನ ಕಂಠದ ಜೊ ಪದವನ್ನು ಹಾಡುವ ಭಾಗ್ಯ ನನ್ನದಾಗಬೇಕೆಂದು ಕವಯಿತ್ರಿ ಹೇಳಿದ್ದಾರೆ. | 02 |
| V. 28. | | ಹರಿಹರನ ಕಾಲ ಸುಮಾರು ಸಾ.ಶ. 1200. ಈತನ ಸ್ಥಳ ಹಂಪೆ.<br>ಹರಿಹರನು 'ಪಂಪಾಶತಕ', ರಕ್ಷಾಶತಕ ಮತ್ತು ಮುಡುಗೆಯ ಅಷ್ಟಕಗಳನ್ನು ವೃತ್ತ ಛಂದಸ್ಸಿನಲ್ಲಿ ರಚಿಸಿದ್ದಾನೆ. 'ಗಿರಿಜಾ ಕಲ್ಯಾಣ' ಪ್ರೌಢ ಚಂಪೂ ಪರಂಪರೆಯಲ್ಲಿ ರಚಿತವಾಗಿರುವ ಕಾವ್ಯ.'ರಗಳೆಯ ಕವಿ' ಎಂದೇ ಪ್ರಸಿದ್ಧನಾಗಿದ್ದಾರೆ. | 03 |
| 29. | | 1914 ರಂದು ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಲ್ಲಿ ಹುಟ್ಟಿದ S.V. ಪರಮೇಶ್ವರ ಭಟ್ಟರು. ಕನ್ನಡದ ಶ್ರೇಷ್ಠ ಕವಿಯಾಗಿದ್ದಾರೆ. ಇವರು 'ಇಂದ್ರಚಾಪ', ಸುರಹೊನ್ನೆ, ಉಪ್ಪು ಕಡಲು, ರಾಗಿಣಿ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.<br>'ಹೇಮಂತ' ಕವಿತೆಯನ್ನು ಅವರ 'ಗಗನಚುಕ್ಕಿ' ಕವನ ಸಂಕಲನದಿಂದ ಆರಿಸಲಾಗಿದೆ.<br>ಕನ್ನಡದ ಶ್ರೇಷ್ಠ ಕವಿ, ಅನುವಾದಕ, ಸಾಹಿತ್ಯ ಸೇವಕರೆಂದು ಖ್ಯಾತರಾಗಿದ್ದಾರೆ. | 03 |

| ಪ್ರಶ್ನೆ ಸಂಖ್ಯೆ | ಕೀಲಿ ಉತ್ತರ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|---|
| VI.<br><br>30. | | ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು.<br>* ಪ್ರಸ್ತಾರ ಹಾಕುವುದು<br>* ಗಣ ವಿಭಾಗಿಸುವುದು<br>* ಛಂದಸ್ಸಿನ ಹೆಸರು ಬರೆಯುವುದು<br>ಒಟ್ಟು<br><br>4 4 4<br>U U U U U U U U — U U<br>ಪ ದ ನ ಆಿ\|ದುನುಡಿ ಯ\| ಲುಂನುಡಿ\|<br><br>4 4 4 4<br>U U U U — U U U — U —<br>ದುದ ನ ಆಿ\|ದಾರ ಯ\|ಲುಮಾಪ ೯\|ರಾ<br><br>4<br>— U U — —<br>ನಾ\|ಡ ವಗ\|೯ ಳ್<br>ಛಂದಸ್ಸು : ಇದು ಮಾತ್ರಾಗಣಾಧಾರಿತ<br>'ಕಂದಪದ್ಯ'ದ ಲಕ್ಷ್ಯವಾಗಿದೆ. | 1×3=3<br>1 ಅಂಕ<br>1 ಅಂಕ<br>1 ಅಂಕ<br>3 ಅಂಕ<br><br>4×3=12<br><br>4×5=20<br>32 |
| VII. | | ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು :<br>* ಅಲಂಕಾರವನ್ನು ಹೆಸರಿಸುವುದು<br>* ಲಕ್ಷಣ ಬರೆಯುವುದು<br>* ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1×3=3<br>1 ಅಂಕ<br>1 ಅಂಕ<br>1 ಅಂಕ<br>3 ಅಂಕ |

| ಪ್ರಶ್ನೆ ಸಂಖ್ಯೆ | ಕೀಲಿ ಉತ್ತರ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|---|
| 31. | | "ಗಿಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು. "<br>ಅಲಂಕಾರ : ಉಪಮಾ ಅಲಂಕಾರ<br>ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.<br>ಸಮನ್ವಯ :<br>ಉಪಮೆಯ : ಗಿಜುಗನ ಗೂಡುಗಳು<br>ಉಪಮಾನ : ತೊಟ್ಟಿಲು<br>ಉಪಮಾವಾಚಕ : ಅಂತೆ<br>ಸಮಾನಧರ್ಮ : ತೂಗಾಡುವಿಕೆ<br>ಇಲ್ಲಿ ಉಪಮೇಯವಾದ ಗಿಜಗನ ಗೂಡುಗಳನ್ನು ಉಪಮಾನವಾದ ತೊಟ್ಟಿಲಿಗೆ ಹೋಲಿಸಲಾಗಿದೆ. ಅಂತೆ ಎಂಬ ಉಪಮಾವಾಚಕ ಪದವಿದ್ದು, 'ತೂಗಾಡು'ಎಂಬ ಸಮಾನ ಧರ್ಮ ಇರುವುದರಿಂದ ಇದು ಪೂರ್ಣೋಪಮಾಲಂಕಾರವಾಗಿದೆ. | |
| VIII.<br>32. | | ಗಾದೆಯನ್ನು ವಿಸ್ತರಿಸಿ ಬರೆಯುವುದು.<br>ಗಾದೆಯ ಮಹತ್ವದ ವಿವರಣೆ<br>ಉದಾಹರಣೆಯೊಂದಿಗೆ ಅರ್ಥ ವಿವರಣೆ<br>ಭಾಷಾಶೈಲಿ, ಪದಬಂಧಗಳಿಗೆ<br>ಒಟ್ಟು<br>ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ ಅಥವಾ ಬೆಳ್ಳಗಿರುವುದೆಲ್ಲ ಹಾಲಲ್ಲ<br>(ಈ ಅಂಶಗಳನ್ನಾಧರಿಸಿದ ಗಾದೆಗಳಿಗೆ ಅಂಕಗಳನ್ನು ನೀಡುವುದು) | 1×3=3<br>1ಅಂಕ<br>1ಅಂಕ<br>1 ಅಂಕ<br>3 ಅಂಕಗಳು |

| ಪ್ರಶ್ನೆ ಸಂಖ್ಯೆ | ಕೀಲಿ ಉತ್ತರ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|---|
| IX. | | ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು.<br>ಕರ್ತೃ, ಆಕರ ಮತ್ತು ಪಠ್ಯದ ಹೆಸರು<br>* ಸಂದರ್ಭದ ವಿವರಣೆ<br>* ಸ್ವಾರಸ್ಯ ಮತ್ತು ಶೈಲಿ<br>ಒಟ್ಟು | 6×3=18<br>1 ಅಂಕ<br>1 ಅಂಕ<br>1 ಅಂಕ<br>3 ಅಂಕಗಳು |
| 33. | | "ಸಾವಿರ ಮೂರ್ಖರಿಗಿಂತ ಒಬ್ಬ ಪಂಡಿತ ಲೇಸು " ಆಯ್ಕೆ ಈ ವಾಕ್ಯವನ್ನು ಡಾ. ಎನ್. ರಂಗನಾಥ ಶರ್ಮಾ ಅವರ "ಶ್ರೀ ಮದ್ವಾಲ್ಮೀಕಿ ರಾಮಾಯಣಮ್" ಕೃತಿಯಿಂದ ಆಯ್ದ ರಾಮರಾಜ್ಯ ಪಾಠದಿಂದ ಆಯ್ದುಕೊಳ್ಳಲಾಗಿದೆ.<br>ಸಂದರ್ಭ : ರಾಮನು ಭರತನಿಗೆ ರಾಜ್ಯಭಾರ ಹೇಗೆ ಮಾಡುತ್ತಿದ್ದಿಯಾ ಎಂದು ಕೇಳುತ್ತಾ. "ಸಾವಿರ ಮೂರ್ಖರಿಗಿಂತ ಒಬ್ಬ ಪಂಡಿತನೇ ಲೇಸೆಂದು ತಿಳಿದು ಅವನನ್ನು ಆದರಿಸುವೆಯಾ ? ಏಕೆಂದರೆ ಕಷ್ಟಕಾಲದಲ್ಲಿ ಪಂಡಿತನೊಬ್ಬನೆ ಸರಿಯಾದ ಉಪಾಯವನ್ನು ಬೋಧಿಸಿ ಕಾರ್ಯವನ್ನು ನಿರ್ವಹಿಸಬಲ್ಲ. ಮೂರ್ಖರ ಸಂಖ್ಯೆ ಸಾವಿರ ಇರಲಿ ಹತ್ತು ಸಾವಿರ ಇರಲಿ ರಾಜನಿಗೆ ಅದರಿಂದ ಯಾವ ಸಹಾಯವು ಆಗುವುದಿಲ್ಲ ಎಂದು ಹೇಳುತ್ತಾನೆ.<br>ಸ್ವಾರಸ್ಯ : ಸಹೋದರನ ಆಡಳಿತ ಕ್ರಮದ ಬಗ್ಗೆ ರಾಮನ ಕಾಳಜಿ ಕಂಡುಬರುವುದು ಸ್ವಾರಸ್ಯ ಪೂರ್ಣವಾಗಿದೆ. | |
| 34. | | "ಚಾವಡಿಗೆ ನಕ್ಷತ್ರಲೋಕದ ಸೊಬಗನ್ನು ಕೊಡುತ್ತವೆ. "<br>ಆಯ್ಕೆ : ಈ ವಾಕ್ಯವನ್ನು ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿಯ ಸಂಪುಟ-32, ಭಾಗ –2 ಗ್ರಂಥದ 'ಅಬುವಿನಿಂದ ಬರಾಮಕ್ಕೆ' ಭಾಗದಿಂದ ಆಯ್ದ 'ಬೆಡಗಿನ ತಾಣ ಜಯಪುರ' ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.<br>ಸಂದರ್ಭ : ಜಯಪುರದ ಅರಮನೆಯಲ್ಲಿ ಚಂದ್ರಕಾಂತ ಶಿಲೆಯ ಮಂಟಪಗಳಿವೆ. ಚಾವಡಿಗಳಿಗೆ ಕನ್ನಡಿಯ ಚೂರುಗಳನ್ನು ಸುಣ್ಣದ ಗಾರೆಯಲ್ಲಿ ಅಂಟಿಸಿ, ಚಿತ್ರವಿಚಿತ್ರ ರೂಪಗಳನ್ನು ನಿರ್ಮಿಸಿ ಅಲಂಕರಿಸಿದಂತಹ ಕಂಬ, ಮುಚ್ಚಿಕೆಗಳುಳ್ಳ ರಚನೆ, ಕತ್ತಲಿನಲ್ಲಿ ದಿವಿಗೆ ಹೊತ್ತಿಸಿದಾಗ ಲಕ್ಷೋಪಲಕ್ಷ ಈ ಗಾಜಿನ ತುಣುಕುಗಳು ಚಾವಡಿಗೆ ನಕ್ಷತ್ರಲೋಕದ ಸೊಬಗು ಕೊಡುತ್ತದೆ<br>ಸ್ವಾರಸ್ಯ : ಈ ಸೊಬಗು ರಜಪೂತ ಅರಸುಗಳ ರಸಿಕ ಜೀವನದ ದ್ಯೋತಕಗಳಾಗಿವೆ. | |

| ಪ್ರಶ್ನೆ ಸಂಖ್ಯೆ | ಕೀಲಿ ಉತ್ತರ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|---|
| 35. | | "ಬೆಳಿಗ್ಗೆ ಎಷ್ಟು ಹೊತ್ತಿಗೆ ಏಳುತ್ತೀರಿ"<br>ಆಯ್ಕೆ : ಈ ವಾಕ್ಯವನ್ನು ಡಾ.ಎಸ್.ಎಲ್. ಭೈರಪ್ಪನವರ ಬಿಡಿ ಲೇಖನದಿಂದ ಆಯ್ದ "ನಾನು ಕಂಡಂತೆ ಡಾ.ಬಿ.ಜಿ. ಎಲ್. ಸ್ವಾಮಿ" ಗದ್ಯ ಪಾಠದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.<br>ಸಂದರ್ಭ : ಡಾ.ಬಿ.ಜಿ. ಎಲ್. ಸ್ವಾಮಿಯವರು ಎಸ್.ಎಲ್. ಭೈರಪ್ಪನವರಿಗೆ ಬಹುಬೇಗ ಸ್ನೇಹವನ್ನು ಹುಟ್ಟಿಸಿದವರು. ನನ್ನ ಜೀವನದಲ್ಲಿ ಇನ್ನು ಒಬ್ಬಿಬ್ಬರು ಮಾತ್ರ ಎಂದು ಹೇಳುತ್ತಾ ಅವರ ಕ್ರಿಯಾಶೀಲತೆ ಕಂಡು "ಬೆಳಿಗ್ಗೆ ಎಷ್ಟು ಹೊತ್ತಿಗೆ ಏಳ್ತಿರಿ" ಎಂದು ಕೇಳಿದರು. "ಮೂರುವರೆ ಮೂರು ಮುಕ್ಕಾಲು" ನಾನೆಂದೆ. "ನಂದೂ ಹೆಚ್ಚುಕಡಿಮೆ ಅದೇ ಹೊತ್ತೇ. ಆದರೆ ನಾನು ಓದೋ ದೋ ಪಿಟೀಲು ಅಭ್ಯಾಸವೋ ಮಾಡ್ತಿನಿ ನಿಮ್ಮ ಹಾಗೆ ವ್ಯಾಯಾಮ ವಾಕಿಂಗ್ ಇಲ್ಲ" ಎಂದರು<br>ಸ್ವಾರಸ್ಯ : ಇಲ್ಲಿ ಇಬ್ಬರ ಸ್ನೇಹ ಎಷ್ಟು ಆತ್ಮೀಯತೆಯಿಂದ ಕೂಡಿತ್ತು ಎಂಬುದು ತೋರಿಸಿಕೊಡುತ್ತದೆ. | |
| 36. | | "ಬಲಿಯನಿತ್ತೊಡೆ ಮುನಿವೆಂ"<br>ಆಯ್ಕೆ : ಈ ವಾಕ್ಯವನ್ನು ಜನ್ನ ಕವಿ ವಿರಚಿತ ಯಶೋಧರ ಚರಿತೆ ಕಾವ್ಯದಿಂದ ಆಯ್ದ "ಬಲಿಯನಿತ್ತೊಡೆ ಮುನಿವೆಂ" ಎಂಬ ಪದ್ಯಭಾಗದಿಂದ ಆಯುದ್ದುಕೊಳ್ಳಲಾಗಿದೆ.<br>ಸಂದರ್ಭ : ಚಂಡಮಾರಿಯು ನನ್ನ ಪೂಜೆ ಪ್ರಾಣಿ ಬಲಿಯಿಂದ ನಡೆಯಕೂಡದು ಎಲ್ಲ ಪ್ರಜೆಗಳು ಜಲಗಂಧ ಹೂಮಾಲೆ ಅಕ್ಕಿ ಧೂಪ, ದೀಪ, ಹವಿಸ್ಸು ತಾಂಬೂಲ ಸಮೂಹಗಳಿಂದ ಪೂಜಿಸುವುದು, ಜೀವ ಬಲಿಯಕೊಟ್ಟರೆ ನಾನು ನಿಮ್ಮ ಮೇಲೆ ಕೋಪಿಸಿಕೊಳ್ಳುವೆನು ಎಂದು ಹೇಳಿ ಮಾಯವಾದಳು.<br>ಸ್ವಾರಸ್ಯ : ಪ್ರಾಣಿ ಹಿಂಸೆ ಮಹಾಪಾಪ ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ. | |

| ಪ್ರಶ್ನೆ ಸಂಖ್ಯೆ | ಕೀಲಿ ಉತ್ತರ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|---|
| 37. | | "ಬಡತನ ಹೊತ್ತಾನೆ ದೊರಕಿ ಫಲವೇನು ? "<br><br>ಆಯ್ಕೆ : ಈ ವಾಕ್ಯವನ್ನು ರಾಘವಾಂಕ ಕವಿಯ ವಿರಚಿತ ಟಿ.ಎಸ್. ವೆಂಕಣ್ಣಯ್ಯನವರು ಸಂಪಾದಿಸಿದ "ಹರಿಶ್ಚಂದ್ರ ಕಾವ್ಯ ಸಂಗ್ರಹ" ಗ್ರಂಥದ "ವಿಶ್ವಾಮಿತ್ರಾ ಶ್ರಮ ಪ್ರವೇಶ" ಭಾಗದಿಂದ ಆಯ್ದ "ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು" ಎಂಬ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.<br>ಸಂದರ್ಭ : ಗಾನರಾಣಿಯರ ನೃತ್ಯಹಾಡು ಆಲಿಸಿದ ಹರಿಶ್ಚಂದ್ರನು ಸರ್ವಾಭರಣವನ್ನು ಕೊಡುವನು. ಆಗ ಗಾನರಾಣಿಯರು "ಬಡತನದ ಹೊತ್ತಾನೆ ಆನೆ ದೊರಕಿ ಫಲವೇನು ಎಂದು ನಿರಾಸೆಯಿಂದ ಉತ್ತರಿಸುತ್ತಾರೆ.<br><br>ಸ್ವಾರಸ್ಯ : ಇಲ್ಲಿ ಗಾನರಾಣಿಯರ ಆಸೆಗೆ ಹರಿಶ್ಚಂದ್ರನು ಕೊಟ್ಟ ಕಾಣಿಕೆ ಅವರ ಮನಸ್ಸು ತಣಿಸಲಿಲ್ಲ ಎಂದು ಸ್ವಾರಸ್ಯಪೂರ್ಣವಾಗಿ ಮೂಡಿ ಬಂದಿದೆ. | |
| 38. | | "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್ "<br><br>ಆಯ್ಕೆ : ಈ ವಾಕ್ಯವನ್ನು ಬಿ.ಎಂ.ಶ್ರೀ. ಕಂಠಯ್ಯನವರು ಸಂಪಾದಕತ್ವದಲ್ಲಿ ಪ್ರಕಟಿಸಿರುವ 'ಕನ್ನಡ ಬಾವುಟ' ಕೃತಿಯಿಂದ ಆಯ್ದ 'ಕನ್ನಡ ನಾಡು ನುಡಿ' ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.<br>ಸಂದರ್ಭ : ಶ್ರೀ ವಿಜಯನು ಕನ್ನಡ ನಾಡಿನ ಜನತೆಯ, ನಾಡಿನ ಕುರಿತು ಅಭಿಮಾನದಿಂದ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಕನ್ನಡಿಗರು ಪದವನ್ನು ಅರಿತುಕೊಂಡು ನುಡಿಯುತ್ತಿದ್ದರು. ನುಡಿದಂತೆ ತಿಳಿದು ಪಾಲನೆ ಮಾಡುತ್ತಿದ್ದರು. ಚತುರರು ನಿಜವಾಗಿ ಓದದೆಯೂ ಕಾವ್ಯ ಪ್ರಯೋಗ ಮಾಡುತ್ತಿದ್ದರೆಂದು ತಿಳಿಸಿದ್ದಾನೆ.<br><br>ಸ್ವಾರಸ್ಯ : ಓದದೆ ಕಾವ್ಯ ಪ್ರಯೋಗ ಮಾಡುವ ಬುದ್ಧಿ ಜೀವಿಗಳು ಕನ್ನಡ ನಾಡಿನಲ್ಲಿದ್ದರೆಂಬುದು ಸ್ವಾರಸ್ಯವೆನಿಸಿದೆ. | |

| ಪ್ರಶ್ನೆ ಸಂಖ್ಯೆ | ಕೀಲಿ ಉತ್ತರ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|---|
| X.<br>39. | | ಪದ್ಯಭಾಗ ಪೂರ್ಣಗೊಳಿಸುವುದು (ತಪ್ಪಿಲ್ಲದೇ ಬರೆದ ಪ್ರತಿ ಸಾಲಿಗೆ 1 ಅಂಕ)<br>ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು<br>ರಯ್ಯಾ ಮಂಚಿದಿಯೆನೆ ತೆಲುಗ<br>ಅಯಯ್ಯ ಎಂಚ ಪೊರ್ಲಾಂಡೆಂದು ತುಳುವರು<br>ಮೈಯುಬ್ಬಿ ಕೇಳ ಬೇಕಣ್ಣ॥<br>**ಅಥವಾ**<br>ಅಂಬುಜವೆಲ್ಲವು ರವಿಯ ನೋಳ್ಪಂತೆ ನೀ<br>ಲಾಂಬುಜ ನೋಳ್ಪಂತೆ ಶಶಿಯಾ<br>ತುಂಬಿದ ಸಭೆಯೆಲ್ಲ ನೃಪನ ನೋಡುವ ಮಿಕ್ಕ<br>ಹಂಬಲ ಮರೆದುದಲ್ಲಲ್ಲಿ. | 1×4=4 |
| XI.<br>40. | | ಪದ್ಯಭಾಗ ಓದಿ, ಅರ್ಥಮಾಡಿಕೊಂಡು ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು<br>ವಿಷಯಾಂಶಕ್ಕೆ<br>ಮೌಲ್ಯ, ಪದಬಂಧ ಮತ್ತು ಭಾಷಾಶೈಲಿ<br>ಒಟ್ಟು<br>ಈ ಪದ್ಯಭಾಗವನ್ನು ಸು.ರಂ. ಎಕ್ಕುಂಡಿ ಅವರ 'ಸಮಗ್ರ ಕಥನ' ಕವನಗಳು ಕೃತಿಯಿಂದ ಆಯ್ದ 'ಪಾರಿವಾಳ' ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.<br>ಕುರುಡು ವಾತ್ಸಲ್ಯದ ಅವಿವೇಕದಿಂದ ಕಷ್ಟಕ್ಕೊಳಗಾಗಿ 'ಮೋಹ' ಎಂಬುದು ಸರ್ವನಾಶಕ್ಕೆ ಕಾರಣವಾಗುತ್ತದೆ. ವ್ಯಾಮೋಹ ತೊರೆದು ತಾಳ್ಮೆಯಿಂದ ಯೋಚಿಸಿ ಕಾರ್ಯಸಾಧನೆ ಮಾಡಬೇಕು. ಜೀವನದಲ್ಲಿ ಏನೂ ಬಂದರೂ ತಾಳಿಕೊಂಡು ಬಾಳಬೇಕು. ಅಂತೆಯೇ ನಮ್ಮ ಹಿರಿಯರು ತಾಳಿಕೊಂಡವನು ಬಾಳಿಯಾನು ಎಂದು ಎಚ್ಚರಿಸಿದ್ದಾರೆ. ಹೀಗಾಗಿ ಜೀವನದಲ್ಲಿ ಯೋಚನೆ, ಆಲೋಚನೆ ಇವುಗಳಿಗೆ ಮಹತ್ವ ನೀಡಿದರೆ ಕಷ್ಟದಿಂದ ಪಾರಾಗಬಹುದು. ಅತಿಯಾದ ಮೋಹ ಕಷ್ಟಕ್ಕೆ ಸಿಲುಕಿಸುತ್ತದೆಂದು ಕವಿ ತಿಳಿಸಿದ್ದಾರೆ. | 1×4=4<br><br>1 ಅಂಕ<br>1 ಅಂಕ<br>4 ಅಂಕ |

| ಪ್ರಶ್ನೆ ಸಂಖ್ಯೆ | ಕೀಲಿ ಉತ್ತರ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|---|
| XII.<br>41. | | ಎಸ್. ರಾಧಾಕೃಷ್ಣನ್‌ರವರು ಕೋಲ್ಕೊತ ವಿಶ್ವವಿದ್ಯಾಲಯದ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿ ನೇಮಕಗೊಂಡಾಗ ಮೈಸೂರಿನಿಂದ ಹೊರಟ ದಿನ ಅವರಿಗೆ ಕೊಟ್ಟಂತಹ ವೈಭವದ ಬೀಳ್ಕೊಡುಗೆ ಯಾವ ಚಕ್ರವರ್ತಿಗೂ ದೊರೆತಿರಲಾರದು. ವೈಭವಕ್ಕಿಂತ ಹೆಚ್ಚಾಗಿ ಹೃದಯದಿಂದ ನೇರವಾಗಿ ಹೊರಹೊಮ್ಮಿದ ಗುರುಪ್ರೇಮ, ಭಕ್ತಿ ಪ್ರೇಮದ ಚಿಲುಮೆ ಉಕ್ಕಿ ಬಂತು. ಮಹಾರಾಜ ಕಾಲೇಜಿನಿಂದ ರೈಲು ನಿಲ್ದಾಣಕ್ಕೆ ಕರೆದೊಯ್ಯುವಾಗ ಸಾರೋಟಿಗೆಗೆ ಕುದುರೆಯನ್ನು ಕಟ್ಟದೇ ಸ್ವತಃ ವಿದ್ಯಾರ್ಥಿಗಳೇ ಎಳೆದೊಯ್ದರು. ರಾಧಾಕೃಷ್ಣನ್ ಅವರಿಗಾಗಿ ಕಾದಿರಿಸಿದ್ದ ಕಂಪಾರ್ಟ್‌ಮೆಂಟನ್ನು ಬರಗು ದಿಂಬು ಹಾಗೂ ರತ್ನಗಂಬಳಿಯನ್ನು ಹಾಸಿ ಮಲಗುವ ಸೀಟನ್ನು, ನೆಲವನ್ನು ಹೂವಿನಿಂದ ಸುಪ್ಪತ್ತಿಗೆಯಂತೆ ಮಾಡಿ ದೈವ ಮಂದಿರವನ್ನು ಭಕ್ತರು ಅಲಂಕರಿಸುವಂತೆ ಅಲಂಕರಿಸಲಾಗಿತ್ತು.<br><br>**ಅಥವಾ** | 2×4=8 |
| 41. | | ಎಸ್. ರಾಧಾಕೃಷ್ಣನ್‌ರವರ ಸ್ಮರಣೀಯ ಸೇವೆಯನ್ನು ಗುರುತಿಸಿ ಭಾರತ ಸರಕಾರದ ಅತ್ಯುನ್ನತ ಪ್ರಶಸ್ತಿಯಾದ 'ಭಾರತರತ್ನ' ವನ್ನು ನೀಡಿ ಗೌರವಿಸಲಾಯಿತು. ಬ್ರಸೆಲ್ಸ್‌ನ ಫ್ರಿ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿಯನ್ನು ಪ್ರಧಾನ ಮಾಡಿತು. ಭಾರತೀಯ ವಿದ್ಯಾಭವನದ ಬ್ರಹ್ಮವಿದ್ಯಾಭಾಸ್ಕರ ಬಿರುದಿಗೂ ಪಾತ್ರರಾದರು. ಹೀಗೆ ಅವರಿಗೆ ದೇಶ-ವಿದೇಶಗಳ ಹಲವಾರು ಗೌರವ ಪದವಿಗಳು ದೊರಕಿದವು. ಭಾರತ ಸರ್ಕಾರ ಸೆಪ್ಟೆಂಬರ್ 5 ರಂದು ಡಾ. ರಾಧಾಕೃಷ್ಣನ್ ಅವರ ಜನ್ಮದಿನವನ್ನು 1962 ರಿಂದ 'ರಾಷ್ಟ್ರೀಯ ಶಿಕ್ಷಕರ ದಿನ' ಎಂದು ಘೋಷಿಸಿ, ಪ್ರತಿವರ್ಷವೂ ಆಚರಿಸಲು ನಿರ್ಧರಿಸಲಾಯಿತು. | |

| ಪ್ರಶ್ನೆ ಸಂಖ್ಯೆ | ಕೀಲಿ ಉತ್ತರ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|---|
| 42. | | ಹೊಸ ಚೈತನ್ಯವನ್ನು ಮೂಡಿಸುವ ಶಕ್ತಿ 'ಹೊಸ ಹಾಡು' ಪದ್ಯದಲ್ಲಿ ಹೇಗೆ ಬಿಂಬಿತವಾಗಿದೆ ? ವಿವರಿಸಿರಿ.<br>**ಅಥವಾ**<br>ಬದುಕಿನ ಗತಿಯನ್ನೇ ಬದಲಿಸುವ ಶಕ್ತಿ ಹೊಸ ಹಾಡು ಪದ್ಯದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿರಿ.<br>ಹೊಸ ಚೈತನ್ಯ ಮೂಡಿಸುವ ಜೀವಗಳಲ್ಲಿ ಹೊಸತನ ಬಿಂಬಿಸುವ, ಶಕ್ತಿ ತುಂಬುವ, ಜಗತ್ತನ್ನೆ ಬೆಳಗಿಸುವ ಜೀವನಕ್ಕೆ ಸ್ಫೂರ್ತಿ ತುಂಬುವುದು.<br>ಯುದ್ಧ ಕ್ರಾಂತಿಯ ಸಂದರ್ಭದಲ್ಲಿ ಹೋರಾಟಕ್ಕೆ ಹಾಡು ಸ್ಫೂರ್ತಿಯಾಗಿ ನಿಲ್ಲುವುದು ಬದುಕನ್ನು ನಿತ್ಯ ನೂತನವಾಗಿಸುವ ಹೊಸ ಹಾಡು ಹೊಸ ಶಕ್ತಿಯನ್ನು ನೀಡುವುದು.<br>ಈ ಹಾಡು ಜಾತಿ–ಕುಲ–ಮತ ಧರ್ಮಗಳನ್ನು ಕಡಿದೊಗೆದು ಹೊಸತನವನ್ನು ತುಂಬುವುದಾಗಿದೆ. ಈ ಹೊಸ ಹಾಡು ಬಾನು ಬುವಿಯವರೆಗೂ ಸಿಡಿದೆದ್ದು ನಿಲ್ಲುತ್ತದೆ.<br>ಮೂವತ್ತು ಮೂರು ಕೋಟಿ ಜನರ ಧ್ವನಿ ಒಂದಾಗಿ ಭೂಮಿ ಆಕಾಶದವರೆಗೂ ಪ್ರತಿಧ್ವನಿಗಳು ಏಳಬೇಕೆಂದು ಕವಿಯು ಆಶಿಸುತ್ತಾರೆ. | |
| XIII.<br>43.<br>ಅ)<br><br><br><br>ಆ) | | ಗದ್ಯಭಾಗ ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸುವುದು.<br>ತಾಯಿಯ ಕಣ್ಣುಗಳಿಂದ ಪ್ರೇಮದ ಕಣ್ಣೀರು ತುಂಬಿ ಬರಲು ಕಾರಣವೇನು ?<br>ಮಗನು ತನ್ನ ಸೇವೆಯನ್ನು ಮಾಡುವ ರೀತಿಯನ್ನು ಕಂಡು, ಕಷ್ಟವಾದರೂ ಸಹಿಸಿಕೊಂಡು ಸೇವೆಯಲ್ಲಿ ತೊಡಗಿದ ರೀತಿ, ರಾತ್ರಿಯೆಲ್ಲ ನಿದ್ದೆಯಿಲ್ಲದೆ ಎಚ್ಚರವಿದ್ದು ಮಾಡಿದ ಸೇವೆ ಕಂಡು ತಾಯಿಯ ಕಣ್ಣುಗಳಿಂದ ಪ್ರೇಮದ ಕಣ್ಣೀರು ಬರಲು ಕಾರಣವಾಯಿತು.<br>ತಾಯಿಯ ಸೇವೆ ಬಾಲಕನಿಗೆ ಹೇಗೆ ಖುಷಿ ನೀಡಿತು ? ತಿಳಿಸಿ.<br>ಬಾಲಕನು ಸದಾಕಾಲ ತಾಯಿಯ ಆಜ್ಞೆಯನ್ನು ಪಾಲಿಸುವುದು, ಸೇವೆ ಮಾಡುವುದು. ಆಕೆಗೆ ಸುಖ ಕೊಡುವುದು. ತಾಯಿ ಹೇಳಿದ ಕೆಲಸ ಚಾಚು ತಪ್ಪದೇ ಮಾಡುವುದು. ಕಷ್ಟವಾದರೂ ಸಹಿಸಿಕೊಂಡು ಮಾಡುವುದು ಖುಷಿ ಎನಿಸುತ್ತಿತ್ತು. | 2+2=4 |

| ಪ್ರಶ್ನೆ ಸಂಖ್ಯೆ | ಕೀಲಿ ಉತ್ತರ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|---|
| XIV. | | ಪತ್ರ ರಚನೆ | |
| 44. | | ವ್ಯಾವಹಾರಿಕ/ಮನವಿಪತ್ರ | |
| | | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕ |
| | | ವಂದನೆಗಳೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | | ಒಟ್ಟು | 5 ಅಂಕ |
| | | **ಅಥವಾ** | |
| | | ಖಾಸಗಿ/ಗೆಳತಿಗೆ ಪತ್ರ. | |
| | | ಇಂದ, ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ಸಮಾಚಾರ | 1 ಅಂಕ |
| | | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕ |
| | | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | | ಒಟ್ಟು | 5 ಅಂಕಗಳು |
| XV. | | ಪ್ರಬಂಧ ಬರವಣಿಗೆ. | 1 ಅಂಕ |
| 45. | | ರಾಷ್ಟ್ರೀಯ ಹಬ್ಬಗಳ ಮಹತ್ವ. | 2 ಅಂಕ |
| | | **ಅಥವಾ** | 1 ಅಂಕ |
| | | ವೈಜ್ಞಾನಿಕ ರಂಗದಲ್ಲಿ ಭಾರತದ ಸಾಧನೆ. | 1 ಅಂಕ |
| | | ಪ್ರಸ್ತಾವನೆ/ಪೀಠಿಕೆ/ವಿಷಯ ಪ್ರವೇಶ | 5ಅಂಕ |
| | | ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | |
| | | ಉಪಸಂಹಾರ/ಮುಕ್ತಾಯ/ವಿಷಯ ಸಮಾಪ್ತಿ | |
| | | ಭಾಷಾ ಶೈಲಿಗೆ, ಪದಬಂಧ | |
| | | ಒಟ್ಟು | |